	(6) ಬೇಗಂ ತಲಾಬ್, ವಿಜಾಪುರ	09.01.2006
	(7) ದೊಡ್ಡ ಕೆರೆ, ಸಕಲೇಶಪುರ	07.03.2006
	(8) ಉಣಕಲ್ ಕೆರೆ, ಹುಬ್ಬಳ್ಳಿ	04.04.2006
III	ತಾತಗುಣಿ ಎಸ್ಟೇಟ್‌ನಲ್ಲಿ ಬರಸೆರ ಸಸ್ಯಗಳನ್ನು ಬೆಳೆಸುವುದು	21.01.2004
IV	ಕೊಡಗು ಜಿಲ್ಲೆ (ದೇವರ ಕಾಡು) ಪವಿತ್ರವನ ಸಂರಕ್ಷಣೆ	07.11.2003
V	ಕರಾವಳಿ ಜಿಲ್ಲೆಗಳಲ್ಲಿ ಜೀವ ವೈವಿಧ್ಯ ನಿರ್ವಹಣೆಯ ಸಂರಕ್ಷಣೆ	12.09.2003
VI	ಕುಂದಾಪುರ ಉಪ ಅರಣ್ಯ ವಿಭಾಗ, ಮಂಗಳೂರು ಅರಣ್ಯ ವಿಭಾಗದಲ್ಲಿ ಕಾಂಡ್ಲವನ ಅಭಿವೃದ್ಧಿ ಮತ್ತು ಸಂರಕ್ಷಣೆ	29.06.2004
VII	ಬೆಳಗಾವಿ ಅರಣ್ಯ ವಿಭಾಗದ ಹಿಡಕಲ್ ಹಿನ್ನೀರು ಯೋಜನೆ, ರಾಣೆಬೆನ್ನೂರು ವನ್ಯಜೀವಿ ವಿಭಾಗದ ಘಟಪ್ರಭ ಪಕ್ಷಿಧಾಮ ಮತ್ತು ಗದಗ್ ಅರಣ್ಯ ವಿಭಾಗದ ಮಾಗಡಿ ತರಿಭೂಮಿ ಸಂರಕ್ಷಣೆ ಮತ್ತು ಅಭಿವೃದ್ಧಿ.	17.09.2003

1074 (1600) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವ ಯಾವ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ (ಬಾಕಿ ಇರುವ ಅನುಮೋದನೆಗೆ ಕಾದಿರುವ ಪ್ರಸ್ತಾವನೆಗಳು)

ಆ) ಸದರಿ ಬಾಕಿ ಇರುವ ಪ್ರಸ್ತಾವನೆಗಳನ್ನು ಕಳುಹಿಸಿದ್ದು ಯಾವಾಗ;

ಇ) ಈ ಪ್ರಸ್ತಾವನೆಗಳ ಅನುಮೋದನೆಗಾಗಿ ರಾಜ್ಯ ಸರ್ಕಾರ ಮಾಡಿದ ಪ್ರಯತ್ನಗಳೇನು;

ಈ) ಈ ಪ್ರಸ್ತಾವನೆಗಳು ಹಾಲಿ ಯಾವ ಹಂತದಲ್ಲಿದೆ?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿರುವ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿರುತ್ತವೆ:

1. ಹಾಸನದಲ್ಲಿ ಜವಳಿ ನಿರ್ದಿಷ್ಟ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ ಸ್ಥಾಪಿಸುವುದು.

2. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸುವುದು.
3. ಹಿರಿಯೂರು ಕೃಷಿ ಆಹಾರ ಪಾರ್ಕು
4. ಮದ್ದೂರು ಕೃಷಿ ಆಹಾರ ಪಾರ್ಕು
5. ಬೆಳಗಾವಿ ಕೃಷಿ ಆಹಾರ ಪಾರ್ಕು

ಕ್ರ.ಸಂ.	ವಿವರ	ಪ್ರಸ್ತಾವನೆ ಸಲ್ಲಿಸಿದ ದಿನಾಂಕ
1.	ಹಾಸನದಲ್ಲಿ ಜವಳಿ ನಿರ್ದಿಷ್ಟ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	13–1–2005
2.	ದೊಡ್ಡಬಳ್ಳಾಪುರದಲ್ಲಿ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್	29–6–2006
3.	ಹಿರಿಯೂರು ಕೃಷಿ ಆಹಾರ ಪಾರ್ಕು	29–9–2005
4.	ಮದ್ದೂರು ಕೃಷಿ ಆಹಾರ ಪಾರ್ಕು	4–5–2006
5.	ಬೆಳಗಾವಿ ಕೃಷಿ ಆಹಾರ ಪಾರ್ಕು	30–5–2003

ಇ) ಕೃಷಿ ಆಹಾರ ಪಾರ್ಕುಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಗಳ ಮಂಜೂರಾತಿಗೆ ಸಂಬಂಧಪಟ್ಟಂತೆ ಸಭೆಯನ್ನು ಕರೆಯಲು ಕೋರಲಾಗಿದ್ದು ಅದರಂತೆ ಕೇಂದ್ರ ಸರ್ಕಾರವು ದಿನಾಂಕ: 8–5–2006ರಂದು ಸಭೆಯನ್ನು ಕರೆದು ಪ್ರಸ್ತಾವನೆಗಳನ್ನು ವಿಮರ್ಶಿಸಿದೆ.

ಈ) ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯವು ದಿನಾಂಕ: 31–8–2005 ರಂದು ಜವಳಿ ನಿರ್ದಿಷ್ಟ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಸದರಿ ಅನುಮೋದನೆಯ ವಿಶೇಷ ಆರ್ಥಿಕ ವಲಯ ಅಧಿನಿಯಮದ ಅನುಸಾರ ಸ್ಥಿರೀಕರಣವನ್ನು ಕಾಯಲಾಗಿದೆ.

ದೊಡ್ಡಬಳ್ಳಾಪುರದಲ್ಲಿ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ಸಂಬಂಧಪಟ್ಟಂತೆ ಪ್ರಸ್ತಾವನೆಯನ್ನು ಇತ್ತೀಚೆಗಷ್ಟೇ ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಹಿರಿಯೂರು ಕೃಷಿ ಆಹಾರ ಪಾರ್ಕಿಗೆ ಸಂಬಂಧಿಸಿದ ಅನುಮೋದನೆಯು ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಮಂತ್ರಾಲಯದ ಪರಿಗಣನೆಯಲ್ಲಿದೆ.

ಮದ್ದೂರು ಆಹಾರ ಪಾರ್ಕಿಗೆ ಅಗತ್ಯವಿರುವ 60 ಎಕರೆ ಜಮೀನಿನ ಲಭ್ಯತೆಯ ಆಧಾರದ ಮೇಲೆ ಕೇಂದ್ರ ಸರ್ಕಾರದ ಅನುಮೋದನೆಯನ್ನು ಕೋರಲಾಗಿದೆ.

ಬೆಳಗಾವಿ ಆಹಾರ ಪಾರ್ಕಿಗೆ ಈ ಹಿಂದೆ ಗುರುತಿಸಿದ ಜಮೀನು ಸೂಕ್ತವಲ್ಲವಾದ್ದರಿಂದ ಹೊಸ ಜಮೀನನ್ನು ಗುರುತಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.